ಆದರೆ ಔರಂಗಜೇಬನ ವೈಯಕ್ತಿಕ ಬದುಕು ಬಹಳ ಅಸ್ತವ್ಯಸ್ತವಾಗಿತ್ತು. ಆತ ತನ್ನ ತಂದೆಯಿಂದ ಎಷ್ಟು ಅವಜ್ಞೆಗೆ ಒಳಗಾಗಿದ್ದ ಎನ್ನುವುದನ್ನು ಸರಿಯಾಗಿ ಹೇಳಿದಾಗ ನಾಟಕಕ್ಕೆ ಬೇರೆ ಆಯಾಮ ಬರುತ್ತದೆ. ಅಕ್ಬರ್ ತನ್ನ ಆಡಳಿತದ ಪ್ರಮುಖ ಹುದ್ದೆಗಳಲ್ಲಿ ಮುಸ್ಲಿಮೇತರರನ್ನು ಹೆಚ್ಚು ನೇಮಕ ಮಾಡಿಕೊಂಡಿದ್ದ. ಆದರೆ ಅದಕ್ಕೂ ಹೆಚ್ಚು ಮುಸ್ಲಿಮೇತರರನ್ನು ನೇಮಕ ಮಾಡಿಕೊಂಡಿದ್ದು ಔರಂಗಜೇಬ್. ಆದ್ದರಿಂದ ಯಾವುದೇ ಒಂದು ವ್ಯಕ್ತಿತ್ವವನ್ನು ಕಪ್ಪು ಬಿಳುಪಿನಲ್ಲಿ ನೋಡಬಾರದು. ನಾನು ನಾಟಕ ನಿರ್ದೇಶನದ ಆರಂಭದ ದಿನಗಳಿಂದಲೂ ಒಳ್ಳೆಯ ವಾತಾವರಣ ಇತ್ತು. ಯಾವುದೇ ಬೆದರಿಕೆ, ಆಕ್ಷೇಪಗಳನ್ನು ಎದುರಿಸಿಲ್ಲ.

◆ ನೀವು ಕತೆ, ಕಾವ್ಯ, ಕಾದಂಬರಿಗಳನ್ನೇ ರಂಗಪಠ್ಯಕ್ಕೆ ಹೆಚ್ಚು ಅಳವಡಿಸಿದ್ದು ಏಕೆ?

ನಾನು ಸಿದ್ಧಮಾದರಿಯ ನಾಟಕಗಳನ್ನು ಮಾಡಲಿಲ್ಲ. ಕಾವ್ಯ, ಸಣ್ಣಕತೆ, ಕಾದಂಬರಿಯ ಕಡೆಯೇ ಗಮನ ಹೋಗುತ್ತದೆ. ಕಾದಂಬರಿಯನ್ನು ರಂಗದ ಮೇಲೆ ತರಲು ಆರಂಭಿಸಿದರೆ ಹೊಸ ಸವಾಲುಗಳ ಜತೆ ಕೆಲಸ ಮಾಡಬೇಕಾಗುತ್ತದೆ. ಬಹುತೇಕ ನಾಟಕ ಕೃತಿಗಳಿಗೆ ಒಂದು ನಿರ್ದಿಷ್ಟ ಆವರಣ ಇರುತ್ತದೆ. ಗಿರೀಶ ಕಾರ್ನಾಡ, ಪಿ. ಲಂಕೇಶ್ ತಮ್ಮ ನಾಟಕ ಕೃತಿಗಳಲ್ಲಿ ಏನು ಹೇಳಿದ್ದಾರೋ ಆ ಆವರಣದಲ್ಲಿಯೇ ನಿರ್ದೇಶಕರು ನಾಟಕಗಳನ್ನು ರೂಪಿಸುತ್ತಾರೆ. ನನ್ನ ಆಲೋಚನೆ ಈ ಆವರಣಗಳು ಇಲ್ಲದ ನಾಟಕಗಳನ್ನು ಸೃಷ್ಟಿಸುವುದು. ಆವರಣಗಳನ್ನು ಒಡೆಯುತ್ತ ಹೊಸ ನಾಟಕಗಳನ್ನು ಸೃಷ್ಟಿಸಿಕೊಳ್ಳಬೇಕು. ಸಿದ್ಧಮಾದರಿಗಳಿಂದ ಬಿಡಿಸಿಕೊಂಡು ಹೊಸ ಪ್ರಯೋಗಗಳಿಗೆ ಪಠ್ಯಗಳನ್ನು ರಂಗಕ್ಕೆ ಸಿದ್ಧಗೊಳಿಸಿದರೆ ನಾನು ಸಹ ಅಪ್‌ಡೇಟ್ ಆಗುತ್ತಿರುತ್ತೇನೆ.

◆ ಈ ಹಿಂದೆ ಪದ್ಯಗಳನ್ನು ಬರೆಯುತ್ತಿದ್ದೀರಿ. ಆದರೆ ಸಾಹಿತ್ಯ ಕ್ಷೇತ್ರದಲ್ಲಿ ನೀವು ಗಂಭೀರವಾಗಿ ಗುರುತಿಸಿಕೊಂಡಿದ್ದು ಕಡಿಮೆಯೇ.

ಈ ಹಿಂದೆ ನಾನು ಬರೆದ ಪದ್ಯಗಳು 'ಪ್ರಜಾವಾಣಿ', 'ಸುಧಾ' ಮತ್ತಿತರ ಪತ್ರಿಕೆ, ವಾರಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಈಗ 'ಚೆಕಾವ್' ಅವರ ನಾಟಕ ಸೇರಿದಂತೆ ಕೆಲವು ನಾಟಕಗಳನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದೇನೆ.

◆ ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ 'ಮಲೆಗಳಲ್ಲಿ ಮದುಮಗಳು' ನಾಟಕ ಪ್ರದರ್ಶನ ಈ ಬಾರಿ ಪರ ವಿರೋಧದ ಚರ್ಚೆಗಳಿಗೆ ಎಡೆ ಮಾಡಿಕೊಟ್ಟಿತು. ಈ ವಿಚಾರವಾಗಿ ನಿಮ್ಮ ಅಭಿಪ್ರಾಯ ಏನು?

ಕುವೆಂಪು ಅವರ ಮುಖ್ಯವಾದ ಈ ಕಾದಂಬರಿಯನ್ನು ರಂಗದ ಮೇಲೆ ತರುವುದೇ ಒಂದು ದೊಡ್ಡ ಕೆಲಸ. ಕಾದಂಬರಿ ಓದದವರಿಗೆ ನಾಟಕ ನೋಡಲು ಅವಕಾಶವಾಗುತ್ತದೆ. ಕಾದಂಬರಿ ಓದಿದವರು ಇದರ ರಂಗರೂಪವನ್ನು ಕಾಣಲು ಸದಾವಕಾಶ ಒದಗುತ್ತದೆ. ಆದರೆ ಈ ಒಂದೇ ಪ್ರಯೋಗಕ್ಕೆ ಪ್ರತಿ ವರ್ಷ ಸರ್ಕಾರದ ಹಣವನ್ನು ಹೆಚ್ಚು ವೆಚ್ಚ ಮಾಡಿದಾಗ ಯಾರಿಗೋ ಲಾಭ ಮಾಡಿಕೊಡಲಾಗುತ್ತಿದೆ ಎನ್ನುವ ಭಾವನೆ ಸಾರ್ವಜನಿಕವಾಗಿ ಬೆಳೆಯುತ್ತದೆ. ರಾಷ್ಟ್ರೀಯ ರಂಗಶಾಲೆಯು ಹೊಸ ಪ್ರಯೋಗಗಳನ್ನು ಮಾಡುವುದರಿಂದ ಅಲ್ಲಿನ ವಿದ್ಯಾರ್ಥಿಗಳ ಬೆಳವಣಿಗೆ ಸಾಧ್ಯ. 'ಇದನ್ನೇ ಮಾಡಿ' ಎಂದರೆ ಅದು ನಟನೆಯ ಅಭ್ಯಾಸಕ್ಕೆ ಮಾರಕ. ಈ ದೃಷ್ಟಿಯಲ್ಲಿ ನಾನು ಒಂದೇ ನಾಟಕವನ್ನು ಪದೇ ಪದೇ ಪ್ರದರ್ಶಿಸಲು ಇಷ್ಟ ಪಡುವುದಿಲ್ಲ.